ಮನಸಾರೆ ದ್ವೇಷಿಸಿದ್ದ. ಎರಡೆರಡು ಮನೆಗಳಿದ್ದವರಿಗೂ ಸಮಸ್ಯೆಗಳಿರುತ್ತವೆ ಎಂದು ಆಶ್ಚರ್ಯವಾಗಿತ್ತು. ಏನಾದರೊಂದು ಸಾಂತ್ವನ ಹೇಳಬಯಸಿದ್ದ. ಮತ್ತೆ ಬಂದರೆ ಅನುಕೂಲವಾದೀತೆಂದು ಕೆಲವು ಸಂಭಾಷಣೆಗಳನ್ನು ರಿಹರ್ಸಲ್ ಮಾಡಿದ್ದ. ಆ ದಿನದ ನಂತರ ಆ ಫೋನ್ ಮತ್ತೆ ಸದ್ದು ಮಾಡಲಿಲ್ಲ.

ಈತ ಅವಳನ್ನೇ ಕರೆದಿರಬಹುದೇ? ಮತ್ತೆ ಕರೆದು ಮಾತಾಡಲಿ ಎಂದು ಶಮಿ ಹಾರೈಸಿದ. ಈತನ ಒಂದು ಬಿಕ್ಕಳಿಕೆ ಸಾಂತ್ವನದ ಮಹಾಪೂರಕ್ಕೆ ಹುಟ್ಟುಹಾಕುತ್ತಿತ್ತು, ಆ ಕಡೆಯಲ್ಲಿದ್ದ ವ್ಯಕ್ತಿ ಅವಳೇ ಆಗಿದ್ದರೆ ಫೋನ್ ಮೇಲೆಯೇ ವಿಶ್ವಾಸ ಉಡುಗಿಹೋಗಲಿದೆ. ಫೋನ್ ಬರೀ ಆಲಿಸುವ, ಯಾವಗುಟ್ಟು ಬಿಟ್ಟುಕೊಡದ ಕಟುಹೃದಯಿಯೆಂದು ಎಂದು ಸಿಟ್ಟು ಬರಲಿದೆ ಎಂದು ನೊಂದುಕೊಂಡ. ಏನೂ ಹೇಳುವುದಿರದಿದ್ದರೆ ಈತ ಯಾಕಾದರೂ ಫೋನ್ ಮಾಡಬೇಕಿತ್ತು ಎಂದು ಸಿಟ್ಟೂ ಬಂತು. ಇಂತಹ ವಿಚಾರಗಳಲ್ಲಿ ಶಮಿ ನೆನೆಯುತ್ತಿರುವಾಗಲೇ, ಅವುಗಳೆಲ್ಲಕ್ಕೂ ಉತ್ತರವೆನ್ನುವಂತೆ ಆತ ತಿರುಗಿ, ಗನ್ ಬಾಯಲ್ಲಿ ತುರುಕಿಕೊಂಡಿದ್ದು ನಡೆದುಹೋಯಿತು.

ಅವನ ಕಣ್ಣುಗಳು ಮುಚ್ಚಿದ್ದವು. ಕೈಗಳು ನಡುಗುತ್ತಿದ್ದವು. ಶಮಿಗೆ ಓಡಿ ಹೋಗಿ ಅವನ ಕೈಯಿಂದ ಗನ್ ಕಿತ್ತೆಗೆಯುವ ಮನಸ್ಸಾಯಿತು. ಆದರೆ ಶಮಿ ಕೈಕಾಲುಗಳಿಲ್ಲದ ಕ್ಯಾಮರಾದಂತೆ ನಿಶ್ಚಲಿತನಾಗಿದ್ದ. ಯಾವ ಕ್ಷಣದಲ್ಲಿಯೂ ಕೇಳಿಬರಬಹುದಾದ ಗುಂಡಿನ ಸದ್ದಿಗೆ ಶಮಿಯ ಮೈಯೆಲ್ಲ ಕಿವಿಯಾಗಿ ಕುಳಿತಿತ್ತು. ತಾನು ಹೊರಗೋಡುವ ಮೊದಲು 911 ಡೈಯಲ್ ಮಾಡಬೇಕೋ ಬೇಡವೋ ಎಂಬ ಚಿಂತನೆಯೂ ನಡೆದಿತ್ತು. ಆದರೆ ಎರಡೆರಡು ಸಲ ಟ್ರಿಗರ್ ಎಳೆಯುವ ಪ್ರಯತ್ನ ನಡೆದಂತೆ ಕಂಡಿತಾದರೂ, ಕೊನೆಗೂ ಆತ ಗನ್ ತೆಗೆದು ಹಾಸಿಗೆಯ ಮೇಲೆಸೆದು ಅದನ್ನೇ ನೋಡುತ್ತ ನಿಂತ. ಕಣ್ಣಾರೆ ಒಂದು ಸಾವನ್ನು, ಅದೂ ಒಂದು ಆತ್ಮಹತ್ಯೆಯನ್ನು ನೋಡುವ ದುರದೃಷ್ಟದಿಂದ ಪಾರಾಗಿದ್ದಕ್ಕಾಗಿ ಶಮಿ ಸಂತೈಸಿಕೊಂಡ.

## 7

ಕಾರ್ಲಿತೋ ಭಾಷಣ ನಿರಂತರವಾಗಿ ಸಾಗಿತ್ತು:

"ಬಹಳಷ್ಟು ಆತ್ಮಹತ್ಯೆಗಳು ನಡೆಯುವುದೆ ಇಂಥ ಅವೇಳೆಯಲ್ಲಿ. ಅವು ಶಾಂತಿಯ ಭ್ರಮೆಯನ್ನು, ಎಲ್ಲವೂ ಮಾಮೂಲು ಎನ್ನುವ ಆಶ್ವಾಸನೆಯನ್ನು ಛಿದ್ರಗೊಳಿಸಿಬಿಡುತ್ತವೆ. ಥೇಟ್ ಭೂಕಂಪದ ತರಹ. ಭೂಕಂಪನಗಳು ಯಾವಾಗಲೂ ಆಗುತ್ತಲೇ ಇರುತ್ತವೆಯಾದರೂ ಮನೆಗಳು ಉದುರಿದಾಗಲೇ, ರಸ್ತೆಗಳು ಬಾಯಿತೆರೆದುಕೊಂಡಾಗಲೇ ಏನೋ ಆಘಾತವಾಯಿತು ಎನ್ನುವಂತೆ ಬೊಬ್ಬೆ ಹಾಕಲಾಗುತ್ತದೆ. ಎಷ್ಟು ಮನೆಗಳು ಕುಸಿದವು, ಎಷ್ಟು ಜನ ಸತ್ತರು ಎನ್ನುವುದರ ಮೇಲೆ ಅವುಗಳ ತೀವ್ರತೆಯನ್ನು ಅಳೆಯುತ್ತಾರೆ. ಕಂಪನ ಅನುಭವಕ್ಕೆ ಬರುವುದು ಆಗಲೇ. ನಿತ್ಯದ ಕಂಪನವನ್ನು, ಒಳಪದರುಗಳ ತಿಕ್ಕಾಟವನ್ನು ಆಲಿಸಲು ಕಿವಿಗಳೇ ಇಲ್ಲ. ಅಯಶಸ್ವಿ ಆತ್ಮಹತ್ಯೆಗಳನ್ನು ನೋಡಲೇಬೇಕಾದ ಪರಿಸ್ಥಿತಿಯಿದ್ದರೆ! ಅದಕ್ಕೇ ನಿನ್ನನ್ನಿಲ್ಲಿ ಕರೆಸಿದ್ದು. ಇವುಗಳಿಗೆ ವೆಸ್ಟ್ ಎಂಡ್ ಛತ್ರ ಮತ್ತು ವಿಸ್ಪರಿಂಗ್ ಸ್ಟ್ರೀಮ್ಸ್‌ನ ಭೇದವಿಲ್ಲ. ಗೋಡೆಗಳಿಲ್ಲದಿದ್ದರೆ ಅಥವಾ ನೋಡುವ ಕಣ್ಣಿದ್ದರೆ."

ಜಗತ್ತು ಪಾರದರ್ಶಕವಾಗಿರುವುದು ಅಸಾಧ್ಯ ಎನ್ನುವ ಕಲ್ಪನೆ ಬಂದಿದ್ದು ಅದೇ ಮೊದಲಲ್ಲ. ಆದರೆ ತದ್ರೂಪಿಯೊಬ್ಬನ ಆತ್ಮಹತ್ಯೆಯ ಪ್ರಯತ್ನ ಶಮಿಯ ಒಳಪದರವನ್ನು ಬುಡಸಮೇತ ಅಲುಗಿಸಿಬಿಟ್ಟಿತ್ತು.